

# ಪಾತ್ರಕ್ಕೆ ನಿದ್ದೆ ಬಿಟ್ಟು ಧ್ಯಾನಿಸುತ್ತೇನೆ

## ವಿನಯ್ ಕಶ್ಯಪ್ ಸಿಂಹ

**ಉದಯದ 'ಸೇವಂತಿ'ಯ ಅಶ್ವಿನ್ ಪ್ರತಾಪ್ ಸಿಂಹ**

◆ **ನಟನೆಯನ್ನು ಶುರು ಮಾಡಿದ್ದು ಹೇಗೆ?**

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದ ನಾನು ಎಂಜಿನಿಯರಿಂಗ್ ಮಾಡಿದ್ದೇನೆ. ಐಟಿ ಕಂಪನಿಗೆ ಸೇರಿಕೊಂಡು ಒಂದು ತಿಂಗಳು ಕಳೆಯುವಷ್ಟರಲ್ಲಿ ನಟನೆಯನ್ನು ಕಲಿಯಲು ರಂಗಭೂಮಿಗೆ ಸೇರಿದೆ. ಒಂದು ವರ್ಷದ ಅವಧಿಯಲ್ಲಿ ಐದಾರು ನಾಟಕಗಳಲ್ಲಿ ಆಡಿದ್ದೇನೆ. ಸೀರಿಯಲ್ ಬರುವ ಮುನ್ನ ಒಂದು ಸಿನಿಮಾ ಮಾಡಿದೆ. ಅದು ಇನ್ನೂ ಬಿಡುಗಡೆ ಆಗಿಲ್ಲ. ಅಲ್ಲಿ ನಮಗೆ ಒಂದು ಐಡೆಂಟಿಟಿ ಇರಬೇಕು ಎನ್ನುವುದು ಗೊತ್ತಾಯಿತು. ಹಾಗಾಗಿ ಸೀರಿಯಲ್‌ಗೆ ಆಡಿಷನ್ ನೀಡಲು ಶುರುಮಾಡಿದೆ. ಮೊದಲ ಅವಕಾಶ ಪಡೆಯಲು ಸುಮಾರು 30 ಆಡಿಷನ್ ನೀಡಿದೆ. ಸ್ಟಾರ್ ಸುವರ್ಣದ 'ಅರಮನೆ ಗಿಳಿ' ನನ್ನ ಮೊದಲ ಧಾರಾವಾಹಿ. ಕೋವಿಡ್ ಕಾರಣಕ್ಕೆ ಅದು ಅಕಾಲಿಕವಾಗಿಯೇ ಮುಗಿಯಿತು. ನಂತರ 'ಸೇವಂತಿ' ಸಿಕ್ಕಿತು. ಇದರಲ್ಲಿ ದೊಡ್ಡ ಉದ್ಯಮಿಯ ಮಗನಾಗಿದ್ದೇನೆ. ಝೀ ಕನ್ನಡದ 'ಹಿಟ್ಲರ್ ಕಲ್ಯಾಣ' ಮತ್ತು ಕಲರ್ಸ್‌ನ 'ಕನ್ನಡತಿ'ಯಲ್ಲೂ ನಟಿಸಿದ್ದೇನೆ. ಈ ಮೊದಲು ಒಂದೆರಡು ಕಿರುಚಿತ್ರಗಳನ್ನೂ ಮಾಡಿದ್ದೇನೆ.

◆ **ರಂಗ ಪ್ರೇಮ ಹುಟ್ಟಿದ್ದು ಹೇಗೆ?**

ನಟನೆಯನ್ನು ಮಾಡಬೇಕು ಎನ್ನುವುದು ಬಹುದಿನಗಳ ಕನಸು. ಎಂಜಿನಿಯರಿಂಗ್ ಕೊನೆ ವರ್ಷದಲ್ಲಿ ಇದ್ದಾಗ ಏನು ಮಾಡಬೇಕು ಎನ್ನುವ ಸ್ಪಷ್ಟತೆ ನನಗೆ ಸಿಕ್ಕಿತು. ಆಗ ತುಂಬ ಯೋಚನೆಯನ್ನು ಮಾಡಲು ಶುರುಮಾಡಿದೆ. ಆಗ ನನಗೆ ಸುಮಾರು ಜನ ರಂಗಭೂಮಿಯಲ್ಲಿ ಕೆಲಸ ಮಾಡಲು ಸಲಹೆ ನೀಡಿದರು. ಹಾಗಾಗಿ ಸಾಫ್ಟ್‌ವೇರ್ ಕಂಪನಿಗೆ ಸೇರಿದವನು ಕೆಲವೇ ದಿನಗಳಲ್ಲಿ ಅದನ್ನು ಬಿಟ್ಟು ನಟನೆಯ ಬೆನ್ನು ಹತ್ತಿದೆ. ರಂಗಭೂಮಿಗೆ ಅಭಿನಯ ಕಲಿಯಬೇಕು ಎಂದು ಹೋದೆ, ಅಲ್ಲಿ ಜೀವನ ಅಂದರೆ ಏನು ಅನ್ನುವುದನ್ನು ಅರ್ಥಮಾಡಿಕೊಂಡೆ. ನಟನೊಬ್ಬ ಅಭಿನಯಿಸಲು ಏನು ಮಾಡಬೇಕು ಎನ್ನುವುದು ಗೊತ್ತಾಯಿತು. ಪ್ರಾಪರ್ಟಿ, ಮೇಕಪ್, ಸೆಟ್, ಲೈಟಿಂಗ್, ಕಾಸ್ಟ್ಯೂಮ್ ಎಲ್ಲವನ್ನೂ ಅರಿತು ಒಬ್ಬ ನಟ ಆಗ್ತಾನೆ. ಇದನ್ನು ಹೊರತಾಗಿ ಮನುಷ್ಯ ಹೇಗೆ ಇರಬೇಕು ಅನ್ನುವುದನ್ನು ಅಲ್ಲಿ ಕೆಲಸ ಮಾಡ್ತಾ ಮಾಡ್ತಾ ಕಲಿತೆ.

◆ **ನಿಮ್ಮ ನಿಲುವಿಗೆ ಕುಟುಂಬ ಹೇಗೆ ಸಹಕಾರ ನೀಡಿತು?**

ಅವಕಾಶ ಸಿಗುತ್ತದೆ ಎಂದು ಯೋಚಿಸಿ ರಂಗಭೂಮಿಗೆ ಸೇರಿದೆ. ಐಟಿ ಓದಿರುವ ನನ್ನ ಮನಸ್ಥಿತಿಯೂ ಹಾಗೆಯೇ ಇತ್ತು. ಆದರೆ ಜೀವನ ಹಾಗಿಲ್ಲ ಎನ್ನುವುದೂ ಮನದಟ್ಟಾಯಿತು. ಓದಿದ ನಂತರ ಕೆಲಸ ಬಿಟ್ಟು ಬಣ್ಣ ಹಚ್ಚಲು ಬಯಸಿದ್ದು ಮನೆಯಲ್ಲಿ ದೊಡ್ಡ ವಿಷಯ ಆಗಿತ್ತು. ಪೋಷಕರನ್ನು ಒಪ್ಪಿಸಲು ತುಂಬ ದಿನಗಳೇ ಬೇಕಾದವು. ಅವರ ಬೆಂಬಲದಿಂದಲೇ ನಾಟಕ ಕಲಿಯಲು ಸಾಧ್ಯವಾಯಿತು. ಒಂದು ವರ್ಷದ ನಂತರ ಅವಕಾಶಗಳು ಸಿಗುವುದು ತಡವಾದಾಗ ತಳಮಳವೂ ಕಾಡಿದ್ದಿದೆ.

◆ **ತೆರೆಗೆ ಬಂದ ಪರಿ ಹೇಗಿತ್ತು?**

ಮೊದಲ ಆಡಿಷನಿನಲ್ಲೇ ಸಿನಿಮಾದಲ್ಲಿ ಅವಕಾಶ ಸಿಕ್ಕಿತು. ಆಗ ಖುಷಿ ಆಯಿತು. ಆದರೆ, ಅದಕ್ಕೆ ಇನ್ನೂ ಪ್ರದರ್ಶನ ಭಾಗ್ಯ ಸಿಕ್ಕಿಲ್ಲ. ಅಲ್ಲಿ ಆದ ಅನುಭವ ನನಗೆ ಕಿರುತೆರೆಯತ್ತ ನೋಡುವಂತೆ ಮಾಡಿತು. ಶ್ರಮಪಟ್ಟು ಹೆಸರು ಮಾಡದೆ ಅಲ್ಲಿ ನೆಲೆ ಸಿಗಲ್ಲ. 25 ಆಡಿಷನ್ ನೀಡಿದರೂ ಒಂದು ಅವಕಾಶ ಸಿಗುತ್ತಿರಲಿಲ್ಲ. ಒಂದೆರಡು ಪಾತ್ರಕ್ಕೆ ಸುಮಾರು 150 ಜನ ನಿಂತಿರುತ್ತಾರೆ. ಮೊದಲು ಒಂದು ಸೀರಿಯಲ್ ಸಿಕ್ಕಿತ್ತು. ಅದು ಪ್ರಸಾರ ಆಗುವ ಒಂದೆರಡು ದಿನ ಮುನ್ನ ಪಾತ್ರ ಬದಲಿಸಿದ್ದರು. ಅದಾಗಿ ವಾರಕ್ಕೆ 'ಅರಮನೆ ಗಿಳಿ'ಯಲ್ಲಿ ಅವಕಾಶ ಸಿಕ್ಕಿತು. ಇದೇ ನನ್ನ ಮೊದಲ ಧಾರಾವಾಹಿ.

◆ **ಆರಂಭದಲ್ಲಿ ಅನಿಶ್ಚಿತತೆ ನಿಮ್ಮನ್ನು ಕಾಡಲಿಲ್ಲವೇ?**

ಸಾಧಿಸಬೇಕು ಎನ್ನುವ ಹಂಬಲ ನನಗೆ ಇತ್ತು. ಅದು ನನ್ನಲ್ಲಿದ್ದ ಚಿಂತನೆಯನ್ನು ತುಂಬ ಗಟ್ಟಿ ಮಾಡಿತು. ನನ್ನ ಸುತ್ತ ಕೆಲ ಗೆಳೆಯರು ಮಹತ್ವಾಕಾಂಕ್ಷಿಗಳಾಗಿದ್ದರು. ಅವರು ನನ್ನ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸುತ್ತಿದ್ದರು. ನಾನು ಸಿನಿಮಾವನ್ನೇ ಮಾಡಬೇಕು ಎಂದು ಬಂದವನು. ಸಿನಿ ಕ್ಷೇತ್ರದಲ್ಲಿ ನನಗೆ ಯಾರೂ ಪರಿಚಿತರಿಲ್ಲ. ಆ ಕ್ಷೇತ್ರದ ಬಗ್ಗೆ ಗೊತ್ತಿಲ್ಲದೆ ಇದ್ದರೂ ನೆಲೆ ಕಾಣಲು ಸಿದ್ಧತೆ ಆರಂಭಿಸಿದೆ. ನಾಟಕದಲ್ಲಿ ಯಾವುದಾದರೂ ಪಾತ್ರವನ್ನು ನಿರ್ವಹಿಸಬೇಕು ಎಂದರೆ, ಎಷ್ಟೋ ರಾತ್ರಿ ನಿದ್ದೆ ಮಾಡುತ್ತಿರಲಿಲ್ಲ. ಪಾತ್ರ ಒಂದರ ಅಗತ್ಯದಂತೆ ಬೀಡಿ ಸೇದಬೇಕಿತ್ತು. ಅದನ್ನು ಹಚ್ಚಲೂ ಬರ್ತಾ ಇರಲಿಲ್ಲ. ಅದಕ್ಕಾಗಿ ಒದ್ದಾಡಿದ್ದೇನೆ. ರಂಗಭೂಮಿ ತರಬೇತಿ ಮುಗಿದ ನಂತರ ಮುಂದೇನು ಎಂಬ ಚಿಂತೆ ಕಾಡಿತು. ಇರುವುದು ಒಂದೇ ಜೀವನ. ಹಾಗಾಗಿ ಇಷ್ಟ ಇರುವುದನ್ನು ಮಾಡುತ್ತಿದ್ದೇನೆ.

■ **ರಾಘವೇಂದ್ರ ಕೆ.**